ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

06

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 31/10/20

# ಯುರೋಪ್ ಕೊರೋನಾ ಹಾಟ್‌ಸ್ಪಾಟ್: ಡಬ್ಲ್ಯುಎಚ್‌ಒ

## ವಿಶ್ವದಲ್ಲಿ ನಿನ್ನೆ ದಾಖಲೆ 5.46 ಲಕ್ಷ ಕೇಸ್ | ಈ ಪೈಕಿ 50% ಯುರೋಪ್ ಪಾಲು
## ಯುರೋಪಲ್ಲಿ 1 ವಾರದಲ್ಲಿ 15 ಲಕ್ಷ ಜನರಿಗೆ ಸೋಂಕು | ಸಾವು 30% ಹೆಚ್ಚಳ

ಲಂಡನ್: ಮಾರ್ಚ್- ಏಪ್ರಿಲ್ ಅವಧಿಯಲ್ಲಿ ಕೊರೋನಾ ರಣಕೇಕೆಯಿಂದ ನಲುಗಿಹೋಗಿ, ಬಳಿಕ ಚೇತರಿಸಿಕೊಂಡಿದ್ದ ಯುರೋಪ್ ಭಾಗ ಮತ್ತೊಮ್ಮೆ ಕೊರೋನಾದ ಪ್ರಮುಖ ಕೇಂದ್ರವಾಗಿ ಪರಿವರ್ತನೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯೇ ಹೇಳಿದೆ.

ಇನ್ನೇನು ಕೊರೋನಾ ಸೋಂಕು ನಿಯಂತ್ರಣಕ್ಕೆ ಬಂದು, ಜಾಗತಿಕ ಆರ್ಥಿಕತೆ ಸರಿದಾರಿಗೆ ಬರಬಹುದು ಎಂಬ ವರದಿಗಳ ಬೆನ್ನಲ್ಲೇ ಹೊರಬಿದ್ದಿರುವ ಈ ಸುದ್ದಿ ಮತ್ತೊಮ್ಮೆ ಜಾಗತಿಕ ಮಟ್ಟದಲ್ಲಿ ಆತಂಕ ಸೃಷ್ಟಿಸಿದೆ.

ಗುರುವಾರ ವಿಶ್ವದಾದ್ಯಂತ ದಾಖಲೆಯ 5.46 ಲಕ್ಷ ಹೊಸ ಸೋಂಕಿತರ ಪತ್ತೆಯಾಗಿದ್ದು, ಇದರಲ್ಲಿ ಯುರೋಪ್ ದೇಶಗಳ ಪಾಲೇ 2.8 ಲಕ್ಷದಷ್ಟಿದೆ. ಅಂದರೆ ಒಟ್ಟು ಸೋಂಕಿತರಲ್ಲಿ ಶೇ.51ರಷ್ಟು ಪಾಲು ಈ ದೇಶಗಳದ್ದೇ ಆಗಿದೆ. ↘8

## 91500 ಕೇಸ್: ಅಮೆರಿಕದಲ್ಲಿ ಹೊಸ ದಾಖಲೆ ಪುಟ 8

## ಸಕ್ರಿಯ ಕೇಸ್ ಈಗ 3 ತಿಂಗಳಲ್ಲೇ ಕನಿಷ್ಠ

### 6 ಲಕ್ಷಕ್ಕೂ ಕಮ್ಮಿ | 85 ದಿನದಲ್ಲಿ ಮೊದಲು
### ಸತತ 5ನೇ ದಿನ 50000ಕ್ಕಿಂತ ಕಮ್ಮಿ ಕೇಸ್

ನವದೆಹಲಿ: ಕೊರೋನಾ ವಿರುದ್ಧದ ಸಮರದಲ್ಲಿ ಒಂದೊಂದೇ ಯಶಸ್ಸಿನ ಹೆಜ್ಜೆ ಇಡುತ್ತಿರುವ ಭಾರತದಲ್ಲಿ ಇದೀಗ ಸಕ್ರಿಯ ಸೋಂಕಿತರ ಸಂಖ್ಯೆ 5.94 ಲಕ್ಷಕ್ಕೆ ಇಳಿದಿದೆ. ಅಂದರೆ ಒಟ್ಟು ಸೋಂಕಿತರ ಪೈಕಿ ಶೇ.7.35ರಷ್ಟು ಮಾತ್ರವೇ ಸಕ್ರಿಯರಾಗಿ ಉಳಿದಿದ್ದಾರೆ. ಸಕ್ರಿಯ ಕೇಸುಗಳ ಸಂಖ್ಯೆ 6 ಲಕ್ಷಕ್ಕಿಂತ ಕೆಳಗೆ ಇಳಿದಿದ್ದು ಕಳೆದ 85 ದಿನಗಳಲ್ಲಿ ಇದೇ ಮೊದಲು. ಹೀಗಾಗಿ ಇದು ಕೊರೋನಾ ವಿರುದ್ಧದ ಹೋರಾಟದಲ್ಲಿ ಹೊಸ ಮೈಲುಗಲ್ಲು ಎಂದು ಸರ್ಕಾರ ಹೇಳಿದೆ. ಈ ಹಿಂದೆ ಆ.6 ರಂದು 5.95 ಲಕ್ಷ ಕೇಸು ದಾಖಲಾಗಿತ್ತು. ಇನ್ನು ಸೋಂಕಿನಿಂದ ಚೇತರಿಸಿಕೊಳ್ಳುವವರ ಪ್ರಮಾಣ ಶೇ.91.15ಕ್ಕೆ ತಲುಪಿದೆ. ಹೊಸ ಕೇಸುಗಳಲ್ಲಿ ಶೇ.80ರಷ್ಟು ಪಾಲು ಕೇವಲ 10 ರಾಜ್ಯಗಳಿಗೆ ಸೀಮಿತವಾಗಿದೆ. ಈ ಪೈಕಿ ಕೇರಳ, ಮಹಾರಾಷ್ಟ್ರ ಮತ್ತು ಕರ್ನಾಟಕ ಮೊದಲ ಮೂರು ಸ್ಥಾನದಲ್ಲಿವೆ ಎಂದು ಸರ್ಕಾರ ಮಾಹಿತಿ ನೀಡಿದೆ. ↘8



## ಆದರೆ, ಕೇರಳದಲ್ಲಿ ಸೋಂಕು ಹೈಜಂಪ್!

### ಸತತ ಎರಡು ದಿನದಿಂದ 7000+ ಕೇಸ್
### ಮಹಾರಾಷ್ಟ್ರವನ್ನು ಹಿಂದಿಕ್ಕಿ ಕೇರಳ ನಂ.1

ನವದೆಹಲಿ: ದೇಶದಲ್ಲೇ ಮೊದಲ ಕೊರೋನಾ ಕೇಸು ಪತ್ತೆಯಾದರೂ, ನಂತರ ಅತ್ಯುತ್ತಮ ನಿರ್ವಹಣೆ ಮೂಲಕ ಜಾಗತಿಕ ಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದ್ದ ಕೇರಳ, ಇದೀಗ ದೇಶದಲ್ಲೇ ಅತಿ ಹೆಚ್ಚು ಕೊರೋನಾ ಸೋಂಕಿತರು ಪತ್ತೆಯಾಗುತ್ತಿರುವ ರಾಜ್ಯವಾಗಿ ಹೊರಹೊಮ್ಮಿದೆ. ಕಳೆದ 2 ದಿನಗಳಿಂದ ರಾಜ್ಯದಲ್ಲಿ ಸತತವಾಗಿ ತಲಾ 7000ಕ್ಕಿಂತ ಹೆಚ್ಚು ಕೊರೋನಾ ಸೋಂಕಿತರು ಪತ್ತೆಯಾಗಿದ್ದಾರೆ. ಗುರುವಾರ ದಾಖಲೆಯ 8790 ಕೇಸು ಪತ್ತೆಯಾಗಿದ್ದರೆ, ಶುಕ್ರವಾರ 7020 ಕೇಸು ಪತ್ತೆಯಾಗಿದೆ.

ಈ ಏರಿಕೆ ಕೇವಲ ಕಳೆದ 2 ದಿನದ್ದಲ್ಲ. ಕಳೆದ ಒಂದು ವಾರಗಳ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ, ಕೊರೋನಾ ಸೋಂಕಿತರು ಪತ್ತೆಯಲ್ಲಿ ನಂ.1 ಸ್ಥಾನದಲ್ಲಿದ್ದ ಮಹಾರಾಷ್ಟ್ರವನ್ನು ಹಿಂದಿಕ್ಕಿ ಕೇರಳ ಮೊದಲ ಸ್ಥಾನಕ್ಕೆ ಏರಿ ನಿಂತಿದೆ. ಅ.24ರಿಂದಲೂ ಸತತವಾಗಿ ಮಹಾರಾಷ್ಟ್ರಕ್ಕಿಂತ ಹೆಚ್ಚು ಕೇಸುಗಳು ಕೇರಳದಲ್ಲಿ ಪತ್ತೆಯಾಗಿವೆ. ↘8

# ಸಕ್ರಿಯ ಕೇಸ್ ಈಗ 3 ತಿಂಗಳಲ್ಲೇ ಕನಿಷ್ಠ

31/10/20

◄ ಮೊದಲ ಪುಟದಿಂದ

ಈ ನಡುವೆ ಶುಕ್ರವಾರ ದೇಶದಲ್ಲಿ 48772 ಹೊಸ ಸೋಂಕಿತರು ಪತ್ತೆಯಾಗಿದ್ದಾರೆ. ಅಂದರೆ ಸತತ 5ನೇ 50000ಕ್ಕಿಂತ ಕಡಿಮೆ ಕೇಸು ದಾಖಲಾದಂತೆ ಆಗಿದೆ. ಕೇಂದ್ರ ಆರೋಗ್ಯ ಸಚಿವಾಲಯದ ಶುಕ್ರವಾರದ ವರದಿ ಅನ್ವಯ ದೇಶದಲ್ಲೀಗ ಕೊರೋನಾ ಸೋಂಕಿತರ ಸಂಖ್ಯೆ 80.88 ಲಕ್ಷಕ್ಕೆ ತಲುಪಿದ್ದು, 1.21 ಲಕ್ಷ ಜನರು ಸಾವನ್ನಪ್ಪಿದ್ದಾರೆ.

# ಆದರೆ, ಕೇರಳದಲ್ಲಿ ಸೋಂಕು ಹೈಜಂಪ್!

31/10/20

◄ ಮೊದಲ ಪುಟದಿಂದ

12 ಕೋಟಿ ಜನಸಂಖ್ಯೆ ಮಹಾರಾಷ್ಟ್ರದಲ್ಲಿ ಈವರೆಗೆ 16.72 ಲಕ್ಷ ಸೋಂಕಿತರು ಪತ್ತೆಯಾಗಿದ್ದರೆ, 3.50 ಕೋಟಿ ಜನಸಂಖ್ಯೆಯ ಕೇರಳದಲ್ಲಿ 4.20 ಲಕ್ಷ ಸೋಂಕಿತರು ಪತ್ತೆಯಾಗಿದ್ದಾರೆ. ಆಗಸ್ಟ್ ಅಂತ್ಯದಿಂದ ಸೆಪ್ಟೆಂಬರ್ ಆರಂಭದವರೆಗೆ ಕೇರಳದಲ್ಲಿ ಎಲ್ಲೆಡೆ ಆಚರಿಸುವ ಓಣಂ ಹಬ್ಬದ ಸಂಭ್ರಮದಲ್ಲಿ ಜನರು ಕೊರೋನಾ ನಿಯಮಗಳನ್ನು ಮೈಮರೆತಿದ್ದೇ ಈ ದಿಢೀರ್ ಏರಿಕೆಗೆ ಕಾರಣವೆನ್ನಲಾಗಿದೆ. ಕೇಂದ್ರದ ಆರೋಗ್ಯ ಸಚಿವ ಹರ್ಷವರ್ಧನ್ ಕೂಡಾ ಕೇರಳದಲ್ಲಿ ಸೋಂಕು ಏರಿಕೆಗೆ ಓಣಂ ಸಂಭ್ರಮಾಚರಣೆಯೇ ಕಾರಣ ಎಂದು ದೂರಿದ್ದರು. ಓಣಂಗೂ ಮುನ್ನ ರಾಜ್ಯದಲ್ಲಿ ಕೇವಲ 50000 ಕೇಸು ದಾಖಲಾಗಿದ್ದರೆ, ನಂತರ ಆ ಪ್ರಮಾಣ 4 ಲಕ್ಷಕ್ಕೆ ತಲುಪಿದೆ.

# ಯುರೋಪ್ ಕೊರೋನಾ ಹಾಟ್‌ಸ್ಪಾಟ್: ಡಬ್ಲ್ಯುಎಚ್‌ಒ

31/10/20

◄ ಮೊದಲ ಪುಟದಿಂದ

ಗುರುವಾರ ವಿಶ್ವದ 15 ದೇಶಗಳಲ್ಲಿ ತಲಾ 10000ಕ್ಕಿಂತ ಹೆಚ್ಚು ಕೇಸು ದಾಖಲಾಗಿದ್ದು, ಈ ಪೈಕಿ 10 ಯುರೋಪ್ ದೇಶಗಳದ್ದು ಎಂಬ ಅಂಕಿ ಅಲ್ಲಿನ ಭೀಕರತೆಯನ್ನು ಎತ್ತಿ ಹೇಳಿದೆ.

**ಭಾರೀ ಏರಿಕೆ:** ಕಳೆದೊಂದು ವಾರದಲ್ಲಿ 15 ಲಕ್ಷ ಮಂದಿ ಸೋಂಕಿತರು ಈ ಭಾಗದಲ್ಲಿ ಕಂಡುಬಂದಿದ್ದಾರೆ. ಒಟ್ಟಾರೆ ಸೋಂಕಿತರ ಸಂಖ್ಯೆ 1 ಕೋಟಿಯ ಗಡಿಯನ್ನು ದಾಟಿದೆ. ಒಂದು ವಾರದಲ್ಲಿ ಸಾವಿನ ಸಂಖ್ಯೆ ಶೇ.30ರಷ್ಟು ಹೆಚ್ಚಳವಾಗಿದೆ. ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಗರಿಷ್ಠ ಮಟ್ಟಕ್ಕೆ ತಲುಪಿದೆ. ಪರೀಕ್ಷೆ- ಪಾಸಿಟಿವಿಟಿ ದರ ಕೂಡ ಹೊಸ ಎತ್ತರಕ್ಕೆ ತಲುಪಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಐರೋಪ್ಯ ಪ್ರಾದೇಶಿಕ ನಿರ್ದೇಶಕ ಹನ್ಸ್ ಕ್ಲುಗ್ ತಿಳಿಸಿದ್ದಾರೆ. ಐರೋಪ್ಯ ರಾಷ್ಟ್ರಗಳ ಆರೋಗ್ಯ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, ಪ್ರಕರಣ ಹೆಚ್ಚಾಗುತ್ತಿದ್ದರೂ ಲಾಕ್‌ಡೌನ್ ಎಂಬುದು ಈ ದೇಶಗಳ ಕೊನೆಯ ಆಯ್ಕೆಯಾಗಿದೆ ಎಂದು ಹೇಳಿದ್ದಾರೆ.

ವಾಸ್ತವವಾಗಿ ಯುರೋಪ್‌ನಲ್ಲಿ 44 ದೇಶಗಳು ಇವೆ. ಆದರೆ ಡಬ್ಲ್ಯುಎಚ್‌ಒ ತನ್ನ ಲೆಕ್ಕಾಚಾರಕ್ಕೆ ರಷ್ಯಾ ಹಾಗೂ ಕೇಂದ್ರ ಏಷ್ಯಾದ ದೇಶಗಳಾದ ತಜಿಕಿಸ್ತಾನ, ಉಜ್ಬೇಕಿಸ್ತಾನ, ಕಜಖ್‌ಸ್ತಾನ, ತುರ್ಕ್‌ಮೆನಿಸ್ತಾನ ಸೇರಿದಂತೆ 53 ದೇಶಗಳನ್ನು ಯುರೋಪ್ ಎಂದು ಪರಿಗಣಿಸಿದೆ.



# 91500 ಕೇಸ್: ಅಮೆರಿಕದಲ್ಲಿ ಹೊಸ ದಾಖಲೆ

ಗುರುವಾರ ಅಮೆರಿಕದಲ್ಲಿ 91500 ಹೊಸ ಸೋಂಕಿತರು ಪತ್ತೆಯಾಗಿದ್ದಾರೆ. ಇದು ಈವರೆಗಿನ ದಾಖಲೆಯಾಗಿದೆ. ಕಳೆದ ತಿಂಗಳು ಭಾರತದಲ್ಲಿ ಹೊಸ ಸೋಂಕಿತರ ಸಂಖ್ಯೆ ಲಕ್ಷದ ಗಡಿಗೆ ಬಂದಾಗ, ಅಮೆರಿಕದಲ್ಲಿ ದೈನಂದಿನ ಸೋಂಕಿತರ ಸಂಖ್ಯೆ 45000ದ ಆಸುಪಾಸಿಗೆ ಬಂದಿತ್ತು. ಆದರೆ ಇದೀಗ ಅದು ದ್ವಿಗುಣಗೊಂಡಿದೆ.